ಪಿಡಬ್ಲ್ಯೂ -1                                                                                    ಓ.ಎಸ್.ನಂ. 183/2018

ದಿನಾಂಕಃ 13-09-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರಿದ ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ.ಪಿ ಎಸ್ ಬಿ ವಕೀಲರಿಂದ

ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಎರಡು ಕೇಸುಗಳು ನಡೆಯುತ್ತಿವೆ. ಆ ಎರಡೂ ಕೇಸುಗಳಿಗೂ ಒಂದೇ ಚೆಕ್ಕುಬಂದಿಯನ್ನು ದಾವಾ ಷೆಡ್ಯೂಲ್ ಗೆ ಕೊಟ್ಟಿರುತ್ತೀರಿ ಎಂದರೆ ಹೌದು. ಸರ್ವೆ ನಂ.1/1, ಚೆಕ್ಕುಬಂದಿ ಪೂರ್ವಕ್ಕೆ ಸ್ಕೂಲ್ ಜವಾನ ನಂಜಪ್ಪ ನವರ ಜಮೀನು, ಪಶ್ಚಿಮಕ್ಕೆ ಲಾಲ್ ಇಬ್ರಾಹಿಂ ಸಾಹೇಬ, ಉತ್ತರಕ್ಕೆ ಸೊಣ್ಣ ಶೆಟ್ಟಿಹಳ್ಳಿ ಗ್ರಾಮ, ದಕ್ಷಿಣಕ್ಕೆ ಸ್ಮಶಾನ ಮತ್ತು ರಾಜಕಾಲುವೆ. ಆ ದಾವೆಯಲ್ಲೂ ನೀವು ಪ್ರತಿವಾದಿ ವಿರುದ್ಧ ನಿರ್ಭಂಧಕಾಜ್ಞೆ ಕೋರಿರುತ್ತೀರಿ ಎಂದರೆ ಸರಿ. ಸರ್ವೆ ನಂ.1/1 ರ ಸೊಣ್ಣಶೆಟ್ಟಿಹಳ್ಳಿ ಗ್ರಾಮಕ್ಕೆ ಸೇರಿದ ಜಮೀನು ನಿಮಗೆ ಸಂಬಂಧ ಇಲ್ಲ ಅಂತ ಹೇಳಿ ಆ ದಾವೆಯು ವಜಾ ಆಗಿರುತ್ತದೆ ಎಂದರೆ ದಾವೆ ವಜಾ ಆಗಿರುತ್ತದೆ ಆದರೆ ಹಕ್ಕು ಇಲ್ಲ ಅಂತ ಹೇಳಿ ಅಲ್ಲ ಎಂದು ನುಡಿಯುತ್ತಾರೆ. ಈ ದಾವೆ ಷ್ಷಡ್ಯೂಲ್ ನಲ್ಲಿ ಪಶ್ಚಿಮಕ್ಕೆ ತೋರಿಸಿರುವ ಹಿಬ್ರಾಹಿಂ ರವರ ಆಸ್ತಿ ಅಂತ ತೋರಿಸಿರುತ್ತೀರಿ ಎಂದರೆ ಸರಿ ಆಗ ಜಮೀನು ಈಗ ಮನೆ ಎಂದು ನುಡಿಯುತ್ತಾರೆ. ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಹಾಕಿರುವ ಸರ್ವೆ ನಂ.1/1 ರ ಚೆಕ್ಕುಬಂದಿ ಮತ್ತು ಈ ದಾವೆಯಲ್ಲಿ ಹಾಕಿರುವ ದಾವಾ ಷೆಡ್ಯೂಲ್ ನ ಚೆಕ್ಕುಬಂದಿ ಒಂದೇ ಎಂದರೆ ಸರಿ. ಆ ದಾವೆಯಲ್ಲಿ ಸರ್ವೆ ನಂ.1/1 ಅಂತ ತೋರಿಸಿದ್ದು ಈ ದಾವೆಯಲ್ಲಿ ಸರ್ವೆ ನಂ.1/2 ಅಂತ ಚೆಕ್ಕುಬಂದಿ ತೋರಿಸಿರುತ್ತೀರಿ ಎಂದರೆ ಹೌದು, ಸಾಕ್ಷಿ ಮುಂದುವರಿದು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ 1/1 ಪ್ರತಿವಾದಿಯರದ್ದು 1/2 ನಿಮ್ಮಂದು ಅಂತ ನಿರ್ಧೇಶ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಮಾನ್ಯ ಉಚ್ಚ ನ್ಯಾಯಾಲಯವು ಯಾವುದೇ ನಿರ್ದೇಶನವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. 1/1 ರಲ್ಲೂ ನಿಮಗೆ ಹಕ್ಕು ಸ್ವಾಧೀನ ಇರುವುದಿಲ್ಲ ಹಾಗೂ 1/2 ರಲ್ಲೂ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸಾಕ್ಷಿಯು ಎರಡರಲ್ಲೂ ಇದೆ ಎಂದು ನುಡಿಯುತ್ತಾರೆ, ಸೊಣ್ಣಶೆಟ್ಟಿಹಳ್ಳಿ ಗ್ರಾಮದ 1/1

ರಲ್ಲೂ ನಿಮಗೆ ಹಕ್ಕು ಸ್ವಾಧೀನ ಇರುವುದಿಲ್ಲ ಹಾಗೂ 1/2 ರಲ್ಲೂ ಯಾವುದೇ ಹಕ್ಕು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

PW1 present, defendant counsel fully cross examination.
For further plaintiff evidence.
Call on 04-10-2023.

**Prl. C. J. & JMFC,.**
**Chintamani**.